ಕಥೆ

# ನನ್ನ ಬದುಕು ನನ್ನದು




**ಸುಶಾಂತ್ ಕೋಟ್ಯಾನ್**

ಕಲೆ: ವಿಶ್ವನಾಥ ಎ.ಎಸ್.


ಈಚೆಗೆ ಒಂದು ವಾರದಿಂದ ಮನೆಗೆ ಹೋಗುವ ಮನಸ್ಸೇಯಿಲ್ಲ ಕರುಣಾಕರನಿಗೆ. ಮನೆಗೆ ಕಾಲಿಡುತ್ತಿದ್ದಂತೆ ಅಮ್ಮ ತನ್ನ ಮದುವೆಯ ಬಗೆಗೆ ಮಾತೆತ್ತಿದಳೆಂದಾದರೆ ಮುಗಿಯಿತು. ಅವನಿಗೆ ಎಲ್ಲಾದರೂ ಹೋಗಿ ಆತ್ಮಹತ್ಯೆ ಮಾಡಿಕೊಂಡು ಸತ್ತುಹೋಗಿ ಬಿಡೋಣವೆಂದೆನಿಸುತ್ತಿತ್ತು! ಆತ್ಮಹತ್ಯೆಯ ನೆನಪಾಗುವಾಗ ಕಣ್ಣಮುಂದೆ ತನ್ನ ಮಡಿದ ಪತ್ನಿ ಸುಲೋಚನಾಳ ನೆನಪಾಗುತ್ತಿತ್ತು. ಜೊತೆಗೆ ತಾನೂ ಕೂಡಾ ಆತ್ಮಹತ್ಯೆ ಮಾಡಿಕೊಂಡು ಸತ್ತುಹೋದೆನೆಂದರೆ ತನ್ನ ಮಗಳು ಖುಷಿಯ ಭವಿಷ್ಯದ ಬದುಕಿನ ಗತಿಯೇನೆಂಬ ಪ್ರಶ್ನೆ ಮನವನ್ನು ಕಾಡಿ ಭಯವಾಗುತ್ತಿತ್ತು. ಆದರೆ ತನ್ನನ್ನು ಮರುಮದುವೆ ಮಾಡಿಕೊಳ್ಳೆಂದು ಕಾಡುವ ಅಮ್ಮನ ಮನವೊಲಿಸುವ ಪರಿಯೆಂತೆಂಬುವುದು ಕರುಣಾಕರನಿಗರ್ಥವಾಗದಾಗಿತ್ತು.

ಆರು ಗಂಟೆಗೆ ತನ್ನ ಕೆಲಸವನ್ನು ಮುಗಿಸಿ ಕಂಪನಿಯಿಂದ ಹೊರಬಂದವನು ಅಲ್ಲೇ ರಸ್ತೆ ಪಕ್ಕದಲ್ಲಿದ್ದ ಕ್ಯಾಂಟೀನೊಂದರಲ್ಲಿ ಟೀ ಕುಡಿಯುತ್ತಾ ಯೋಚನೆಯೊಳು ಜಾರಿದ್ದನು. ಒಂದು ಕಪ್ ಟೀ ಹಿಡಿದುಕೊಂಡು ಅರ್ಧಗಂಟೆಯನ್ನು ಕಳೆದಿದ್ದನು. ಇದೀಗ ಗಂಟೆ ಆರೂವರೆ ದಾಟಿತ್ತು. ‘ಇಷ್ಟು ಬೇಗ ಮನೆ ಸೇರಿದರೆ ಕಿರಿಕಿರಿ ತಪ್ಪುವುದಿಲ್ಲ. ಅಲ್ಲದೆ ಪಕ್ಕದ ಮನೆಯ ಸಾವಿತ್ರಕ್ಕನ ತಂಗಿ ಸವಿತಾ ಮನೆಗೇ ಬಂದು ಕುಳಿತಿರುತ್ತಾಳೆ. ಅಮ್ಮಾ ಅಂತು ಅವಳನ್ನೇ ಮದುವೆಯಾಗು ಎಂದು ಒತ್ತಾಯಿಸುತ್ತಿದ್ದಾಳೆ. ಆ ವಿಷಯ ಅವಳಿಗೂ ಗೊತ್ತಿದೆ. ನನ್ನ ಅಮ್ಮ ಸಾವಿತ್ರಕ್ಕನನ್ನು ಕೇಳಿಯೂ ಆಗಿದೆ. ಅವರದಕ್ಕೆ ಒಪ್ಪಿಯೂ ಆಗಿದೆ. ಹೀಗಿರುವಾಗ ಈಗ ಮನೆ ಸೇರಿದೆನೆಂದರೆ ಅವಳನ್ನೆದುರಿಸುವ ಕಷ್ಟ. ಸದ್ಯ ಹೇಗಾದ್ರು ಸಮಯ ಕಳೆಯಬೇಕು. ಏನ್ಮಾಡೋದು?’ ಎಂದು ಯೋಚಿಸುತ್ತಲೇ ಕ್ಯಾಂಟೀನ್ ಕೌಂಟರ್ ಬಳಿ ಬಿಲ್ ಪೇ ಮಾಡಿ ಹೊರಬಂದು ತನ್ನ ಬೈಕ್ ಪಕ್ಕ ನಿಂತನು. ಮಳೆ ಸಣ್ಣಗೆ ಹನಿಯುತ್ತಿತ್ತು. ಹಾಗೇ ಬೈಕ್ ಹ್ಯಾಂಡಲ್‌ಗೆ ಸಿಕ್ಕಿಸಿದ್ದ ಹೆಲ್ಮೆಟನ್ನು ತೆಗೆದು